ರಾತ್ರಿ ಊಟ ಮಾಡಬೇಕಾದರೆ ಮಗನ ಹತ್ತಿರ ವಿಷಯ ಪ್ರಸ್ತಾಪಿಸಿದ, "ಕೃಷ್ಣಾ, ನಮಗೀಗ ವಯಸ್ಸಾಗಿದೆ. ಅಲ್ಲದೆ ಕಾಲ ಬಹಳಷ್ಟು ಬದಲಾಗುತ್ತಿದೆ. ಮಧ್ಯಾಹ್ನ ಅಂಗಡಿಯಲ್ಲಿ ನಡೆದದ್ದು ನಿನಗೆ ಗೊತ್ತಲ್ಲವೇ. ನನ್ನ ನಿರ್ಣಯಗಳು ನಿನಗೆ ಭಾರವಾಗಬಾರದಲ್ಲವೇ?"

"ಅಪ್ಪಾ, ನೀವು ಅಮ್ಮ ಬಹಳ ಕಷ್ಟಪಟ್ಟು ಅಂಗಡಿಯನ್ನು, ವ್ಯಾಪಾರವನ್ನು ಬೆಳೆಸಿದ್ದೀರಿ. ನಿಮ್ಮನ್ನು ನೋಡಿಯೇ ನಾನು, ನಿಮ್ಮ ಸೊಸೆ ವ್ಯಾಪಾರದಲ್ಲಿ ಹೇಗಿರಬೇಕೆಂದು ಕಲಿಯುತ್ತಿದ್ದೇವಷ್ಟೆ. ನಿಮ್ಮ ಹಾಗಿದ್ದೂ ಒಬ್ಬರ ಮರ್ಜಿಯಲ್ಲಿರದೇ ನಾವು ನಾಲ್ಕೂ ಜನ ನಿಯತ್ತಿನಿಂದ ಬದುಕು ಕಟ್ಟಿಕೊಳ್ಳಬಹುದಲ್ಲವೇ?'' ಅಂದ. ಆವತ್ತು ಚಂದ್ರಣ್ಣ ಸಮಾಧಾನದಿಂದ ನಿದ್ದೆ ಮಾಡಿದ. ಬೆಳಗ್ಗೆ ಏಳುವಷ್ಟರಲ್ಲಿ ಮಗ ಅಪ್ಪನಿಗಾಗಿ ಕಾದು ಕೂತಿದ್ದ.

"ಏನು ವಿಷಯ ಕೃಷ್ಣ" ಎಂದು ಕೇಳಿದ ಚಂದ್ರಣ್ಣ.

"ಏನಿಲ್ಲಪ್ಪಾ... ಬಂಡಿ ಶೇಷರೆಡ್ಡಿ ಕೋಕಾ–ಕೋಲಾ ಏಜನ್ಸಿ ತೆಗೆದುಕೊಂಡಿದ್ದಾನಂತೆ. ಮೊದಲು ಒಂದಿಬ್ಬರನ್ನು ಕೇಳಿದರೂ ನಿಮಗೆ ಹೆದರಿ ಬೇಡವೆಂದುಬಿಟ್ಟರಂತೆ. ಆದರೆ ಆ ಶೇಷರೆಡ್ಡಿ ಅದ್ಯಾರು ಅಡ್ಡಿಪಡಿಸುತ್ತಾರೋ ನೋಡುವ ಅನ್ನತ್ತಾ ಏಜೆನ್ಸಿ ತೆಗೆದುಕೊಂಡಿದ್ದಾನೆ. ಇಂದು ಬೆಳಗ್ಗೆಯೇ ಚಹಾದಂಗಡಿಯ ಹತ್ತಿರ ನನಗೆ ಸಿಕ್ಕಿದ್ದ. ನನ್ನ ನೋಡುತ್ತಲೇ "ನಿಮ್ಮ ತಂದೆಯವರಿಗೆ ಹೇಳು. ಸತ್ಯಾಗ್ರಹಕ್ಕೆ ಕೂಡುವುದು, ಅಂಗಡಿಗೆ ಬೆಂಕಿ ಹಚ್ಚುವುದು ಮಾಡುವುದಕ್ಕೆ ಇದು ಬಿಳಿಯರ ಕಾಲವಲ್ಲ. ಸೀದಾ ಒಳಗೆ ಹಾಕಿ ಬಿಡುತ್ತಾರೆ, ಗೊತ್ತುಂಟಾ? ಅಂದು ಜೋರು ಮಾಡಿದ" ನಡೆದ ವಿಷಯ ತಿಳಿಸಿದ.

ಚಂದ್ರಣ್ಣ ನೇರವಾಗಿ ಶೇಷರೆಡ್ಡಿಯ ಮನೆಗೆ ನಡೆದ.

"ಚಂದ್ರಣ್ಣನವರೆ ಬನ್ನಿ ಬನ್ನಿ" ಅಂದ ಶೇಷರೆಡ್ಡಿ.

"ರೆಡ್ಡಿ ಈಗಷ್ಟೇ ನನ್ನ ಮಗನ ಹತ್ತಿರ ಏನೋ ಹೇಳಿದ್ದಿಯಂತೆ... ಎಲ್ಲಿ ಮತ್ತೊಮ್ಮೆ ಹೇಳು ಕೇಳುವಾ" ಅಂದ.

"ಅಯ್ಯೋ... ನಾನೆಂಥದ್ದು ಹೇಳಿದ್ದು... ಎಂಥದೂ ಇಲ್ಲ" ಅಂದ ಗಲಿಬಿಲಿಗೊಂಡು.

"ಇರಲಿ... ಮೂರು ತಿಂಗಳ ಮೊದಲೇ ತಯಾರು ಮಾಡಿ ಮುಚ್ಚಿಟ್ಟು, ಈಗ ಮಾರಲು ಬರುವ ನಿನ್ನ ಆ ಮಲೆತ ವಿದೇಶೀ ನೀರು ಚೆಂದವೋ... ಇವತ್ತೇ ಈ ನೆಲದಿಂದ ಬಂದ ನನ್ನೂರಿನ ತಾಜಾ ನೀರಿನಿಂದ ತಯಾರು ಮಾಡಿದ ಪಾನೀಯ ಚೆಂದವೋ ನೋಡುವ" ಎಂದು ಬಂದುಬಿಟ್ಟ.

ಮರುದಿನವೇ ಮೂರು ತಿಂಗಳ ಹಿಂದೆ ತಯಾರಿಸಿಟ್ಟಿದ್ದ ಕೋಕಾ–ಕೋಲಾವನ್ನು ಮೇಳದೊಂದಿಗೆ ಮೆರವಣಿಗೆಯಲ್ಲಿ ಊರೊಳಗೆ ತಂದ ರೆಡ್ಡಿ.

ಕಾವಲಿಯೆಂಬ ಆ ಊರಿನ ಜನರಿಗೆ ಆ ವಿದೇಶೀ ಪಾನೀಯ ಬಂದ ಮೊದಲ ದಿನ ಬೆರಗಾಗಿತ್ತು. ಅದರ ಸೀಸೆ ಮುಟ್ಟಿ ನೋಡುವುದು, ಕೆಲವರು ಅದನ್ನ ಕುಡಿಯುವುದು, ಮನೆಯ ಹೆಂಗಸರಿಗಾಗಿ ಕೊಂಡು ಹೋಗುವುದು ನಡೆಯಿತು. ಚಂದ್ರಣ್ಣನೂ ಒಂದು ಕೋಕ–ಕೋಲಾ ತರಿಸಿದ. ಅದನ್ನ ಮನೆಯಲ್ಲಿ ತಂದಿಟ್ಟ. "ನಾವು ಇದಕ್ಕೆ ಸಮನಾದದ್ದನ್ನು ಅಲ್ಲ, ಇದಕ್ಕಿಂತ ಒಳ್ಳೆಯದನ್ನು ತಯಾರು ಮಾಡಬೇಕು."

"ಸರಿ ಹಾಗೇ ಮಾಡುವ" ಅಂದಳು ಲಕ್ಷ್ಮಮ್ಮ.

"ಇದಕ್ಕಿಂತ ರುಚಿಯಾಗಿ, ಇದಕ್ಕಿಂತಾ ಘಾಟು ಇರೋ ಹಾಗೆ ಮಾಡಬೇಕು. ಕೋಕಾ–ಕೋಲಾಗಿಂತಾ ಸೋವಿ ದರದಲ್ಲಿ ಮಾರಬೇಕು. ಹೀಗೆ ಏಟಿಗೆ ಎದಿರೇಟು ಕೊಟ್ಟರಷ್ಟೇ ಈ ವಿದೇಶಿ ನಾಯಿಗಳಿಗೆ ತಿಳಿಯುವುದು" ಅಂದ.

ನಾಲ್ವರೂ ತಲಾ ಒಂದು ಗುಟುಕು ಕುಡಿದು ನೋಡಿದರು. ವರ್ಷಗಟ್ಟಲೆ ಸೋಡಾಗಳು, ತಂಪು